# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್.ಸಿ. ಸಂಖ್ಯೆಃ 1/2020

ಅ.ಸಾ. 06

ದೊ.ಸಾ. 07

| | | |
|---|---|---|
| ಸಾಕ್ಷಿಯ ಹೆಸರು | ಃ | ಶಿವಪ್ಪ ಹುಲಗಣ್ಣವರ |
| ತಂದೆ ಹೆಸರು | ಃ | ಹನಮಂತಪ್ಪ |
| ವಯಸ್ಸು | ಃ | 51 ವರ್ಷ |
| ಉದ್ಯೋಗ | ಃ | ವಾಟರ್ಮನ್ |
| ವಾಸಸ್ಥಳ | ಃ | ಹಂಗರಕಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ | 10/11/2021 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

1993 ರಿಂದ ಈವರೆಗೂ ನಾನು ಹನಗರಕಿ ಪಂಚಾಯಿತಿಯಲ್ಲಿ ವಾಟರಮನ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಫ್ರಾಸಾ.1 ರಿಂದ 4 ಇವರ ಪರಿಚಯ ಇದೆ. ಆರೋಪಿಯನ್ನು ನೋಡಿ ಪರಿಚಯವಿದೆ.

2. 2018 ರಲ್ಲಿ ಹಂಗರಕಿ ಪಂಚಾಯಿತಿಯ ದಾಖಲೆಗಳಿಗೆ ಬೆಂಕಿ ಹತ್ತಿ ಸುಟ್ಟ ಬಗ್ಗೆ ನನಗೆ ಗೊತ್ತಿಲ್ಲ. 2018 ರಲ್ಲಿ ನನ್ನ ಆರೋಗ್ಯ ಸರಿ ಇಲ್ಲದ ಕಾರಣ ನಾನು ಪಂಚಾಯಿತಿಗೆ ಹೋಗಿರಲಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ನೀಡಲಾಯಿತು).**

ಎಸ್.ಸಿ. ಸಂಖ್ಯೆ.1/2020

ಅ.ಸಾ. 06

**ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದಃ**

3. ದಿಃ 15/02/2018 ರಂದು ಮುಂಜಾನೆ ಪಂಚಾಯಿತಿಯ ಸಿಬ್ಬಂದಿಗಳು ಹಾಗೂ ನಾನು ಕಚೇರಿಗೆ ಬಂದು ಫೈಲ್ ಗಳನ್ನು ಹೊಂದಿಸಿಟ್ಟು ಚಹಾ ಕುಡಿಯಲು ಹೋಗಿ ಬರುವಾಗ ಆರೋಪಿ ಪಂಚಾಯಿತಿಯ ಕಚೇರಿಯ ಒಳಗೆ ನುಗ್ಗಿ ಕೆಲವು ಫೈಲ್‌ಗಳನ್ನು ಪಂಚಾಯಿತಿಯ ಹೊರಗೆ ಹಾಕಿ ಬೆಳಿಗ್ಗೆ 10.45 ಗಂಟೆಗೆ ಸದರಿ ಫೈಲ್‌ಗಳಿಗೆ ಬೆಂಕಿ ಹಚ್ಚಿದ ಹಾಗೂ ಅದರಲ್ಲಿಯ ಕೆಲವು ದಾಖಲೆಗಳು ಭಾಗಶಃ ಸುಡುತ್ತಿರುವಾಗ ನಾನು ಮತ್ತು ಪಂಚಾಯಿತಿಯ ಸಿಬ್ಬಂದಿಗಳು ನೀರು ಹಾಕಿ ಬೆಂಕಿ ಆರಿಸಿದೆವು ಅನ್ನುವುದು ಸರಿಯಲ್ಲ. ಈ ವಿಷಯವನ್ನು ಪಂಚಾಯಿತಿಯ ಪಿಡಿಓ ರವರಿಗೆ ಮತ್ತು ಪಂಚಾಯಿತಿಯ ಅಧ್ಯಕ್ಷರು ಮತುತ ಉಪಾಧ್ಯಕ್ಷರಿಗೆ ತಿಳಿಸಿದೆವು ಅನ್ನುವುದು ಸರಿಯಲ್ಲ. ಪೊಲೀಸರು ನನ್ನ ಸಾಕ್ಷಿಯಾಗಿ ವಿಚಾರಣೆ ಮಾಡಿದ್ದಾರೆ.

4. ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ಈಗ ನನಗೆ ಓದಿ ತೋರಿಸಿದಂತೆ ನಿಶಾನೆ.ಪಿ.7 ರಂತೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ. ಆರೋಪಿಗೆ ನಮ್ಮ ಊರಿನಲ್ಲಿ ಧಾಬಾ ಇರುವುದಿಲ್ಲ. ಆತ ಹೊಲಮನೆ ಕೆಲಸ ಮಾಡುತ್ತಾನೆ. ಆರೋಪಿ ನಮ್ಮ ಗ್ರಾಮದವನಿದ್ದು ಅವನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಮುಮಾ.1 ಆ ದಿನ ಸುಟ್ಟ ನಮ್ಮ ಕಚೇರಿಯ ದಾಖಲೆಗಳು ಎನ್ನುವುದು ನನಗೆ ಗೊತ್ತಿಲ್ಲ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ**

5. ಇಲ್ಲವೆಂದು ಹೇಳುತ್ತಾರೆ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

10/11/2021

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.